# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 29

**ಸ್ವಾಮಿ ನಿತ್ಯಸ್ಥಾನಂದ**

## ವಿಚಾರ ಮಾರ್ಗ


**ಮ:** ‘‘ಜಹಜು ಕಲ್ಕತ್ತದ ಕಡೆಗೆ ಹೋಗುತ್ತಿದೆ. ಆದರೆ ಯಾರು ಜಹಜಿನಲ್ಲಿ ಕುಳಿತು ಪರಮಹಂಸರ ದರ್ಶನ ಮಾಡುತ್ತ ಅವರ ಅಮೃತಮಯ ವಾಣಿಯನ್ನು ಕೇಳುತ್ತಿದ್ದಾರೊ, ಅವರಿಗೆ ಜಹಜು ಚಲಿಸುತ್ತಿರುವುದು ಗೊತ್ತೇ ಆಗಲಿಲ್ಲ. ಸುಂದರವಾದ ಉದ್ಯಾನವನಗಳಿಂದ ಮತ್ತು ದೇವಾಲಯಗಳಿಂದ ಕೂಡಿದ ದಕ್ಷಿಣೇಶ್ವರ ಕಣ್ಣಿಗೆ ಮರೆಯಾಗುತ್ತಾ ಬಂತು. ಜಹಜಿನ ಹುಟ್ಟು ಗಾಲಿಯ ಕಡೆತಕ್ಕೆ ಸಿಕ್ಕಿದ ಗಂಗಾವಾರಿ ನೊರೆಯಿಂದ ತುಂಬಿ ಘೋರ್ಗರೆಯುತ್ತ ಅಲೆಗಳಿಂದ ಅಲ್ಲೋಲಕಲ್ಲೋಲವಾಗುತ್ತಿದೆ. ಭಕ್ತರಿಗೆ ಇವುಗಳಾವುದರ ಅರಿವು ಆಗುತ್ತಲೇ ಇಲ್ಲ. ಅವರು ಮುಗ್ಧರಾಗಿ ನೋಡುತ್ತಿದ್ದಾರೆ, ನಗುಮುಖರಾದ, ಆನಂದಮಯ ರಾದ, ಪ್ರೇಮಾನುರಂಜಿತ ನಯನರಾದ, ಪ್ರಿಯದರ್ಶನರಾದ ಅದ್ಭುತ ಯೋಗಿವರ್ಯ ಪರಮಹಂಸರನ್ನು. ಪರಮಹಂಸರಿಗೆ ಭಗವಂತನ ಹೊರತು ಬೇರೇನೂ ಗೊತ್ತಿಲ್ಲ. ಜ್ಞಾನವಾಹಿನಿ ಅವರ ಬಾಯಿಂದ ಸುಮ್ಮನೆ ಹರಿಯುತ್ತಲೇ ಇದೆ.’’

**ಶ್ರೀರಾಮಕೃಷ್ಣರು:** ‘‘ಜ್ಞಾನಮಾರ್ಗಾವಲಂಬಿ ವೇದಾಂತಿಗಳು ಹೇಳುತ್ತಾರೆ: ಸೃಷ್ಟಿ, ಸ್ಥಿತಿ, ಪ್ರಳಯ, ಜೀವ, ಜಗತ್ತು ಇವೆಲ್ಲ ಶಕ್ತಿಯ ಕ್ರೀಡೆ. ವಿಚಾರಮಾಡಿ ನೋಡಿದರೆ ಇವೆಲ್ಲ ಸ್ವಪ್ನದ ಹಾಗೆ. ನಿಜವಾಗಿ ಬ್ರಹ್ಮನೇ ಏಕಮಾತ್ರ ವಸ್ತು. ಉಳಿದವೆಲ್ಲ ಅವಸ್ತು. ಶಕ್ತಿಯೂ ಸ್ವಪ್ನದೋಪಾದಿಯಲ್ಲಿ ಅವಸ್ತು.’’

ಡಯಜಿನಸ್ (Diogenes) ಎಂಬ ಗ್ರೀಕ್ ತತ್ತ್ವಜ್ಞಾನಿಯು ಯಾವಾಗಲೂ ‘ಎಲ್ಲವೂ ಸ್ವಪ್ನದಂತೆ’ ಎಂದು ಹೇಳುತ್ತಿದ್ದನು. ಒಮ್ಮೆ ಅವನ ಕಾಲಿಗೆ ಪೆಟ್ಟು ಬಿದ್ದು ನೋವಿನಿಂದ ಕುಂಟುತ್ತಿದ್ದನು. ಯಾರೋ ಅವನನ್ನು ಕೇಳಿದರು: ‘‘ನೀವು ಯಾವಾಗಲೂ ಹೇಳುತ್ತೀರಿ, ಎಲ್ಲವೂ ಸ್ವಪ್ನವತ್ ಎಂದು. ಈಗ ಈ ಕಾಲು ನೋವಿನ ಬಗ್ಗೆ ಏನು ಹೇಳುತ್ತೀರಿ?’’ ಡಯಜನಿಸ್ ಉತ್ತರ: ‘‘ಹೌದು, ಇದೊಂದು ನೋವಿನ ಕನಸು.’’(painful dream)

ಶ್ರೀಶಂಕರಾಚಾರ್ಯರು ತಮ್ಮ ದಕ್ಷಿಣಾಮೂರ್ತಿ ಸ್ತೋತ್ರದ ಮೊದಲನೆಯ ಶ್ಲೋಕದಲ್ಲಿ ಹೀಗೆ ಹೇಳುತ್ತಾರೆ:

ವಿಶ್ವಂ ದರ್ಪಣದೃಶ್ಯಮಾನನಗರೀತುಲ್ಯಂ ನಿಜಾಂತರ್ಗತಂ ।
ಪಶ್ಯನ್ನಾತ್ಮನಿ ಮಾಯಯಾ ಬಹಿರಿವೋದ್ಭೂತಂ ಯಥಾ ನಿದ್ರಯಾ॥



‘‘ಈ ವಿಶ್ವವು ಕನ್ನಡಿಯಲ್ಲಿ ಕಾಣುತ್ತಿರುವ ನಗರಕ್ಕೆ ಸಮಾನವಾದುದು. ಅದು ನಿಜವಾಗಿಯೂ ನಮ್ಮೊಳಗೇ ಇರುವುದಾದರೂ ಮಾಯೆಯ ದೆಸೆಯಿಂದ ನಮ್ಮ ಹೊರಗಡೆ ಕಾಣುತ್ತಿದ್ದೇವೆ — ಕನಸಿನ ದೃಶ್ಯಗಳು ಮನಸ್ಸಿನಲ್ಲಿಯೇ ಇರುವುದಾದರೂ ಹೊರಗೆ ಇರುವಂತೆ ನಾವು ಅನುಭವಿಸುವುದಿಲ್ಲವೇ, ಹಾಗೆ.’’ ಗೌಡಪಾದರೂ ಇದನ್ನೇ ಸಮರ್ಥಿಸುತ್ತಾರೆ:

ಸ್ವಪ್ನಮಾಯೇ ಯಥಾ ದೃಷ್ಟೇ ಗಂಧರ್ವನಗರಂ ಯಥಾ।
ತಥಾ ವಿಶ್ವಮಿದಂ ದೃಷ್ಟಂ ವೇದಾಂತೇಷು ವಿಚಕ್ಷಣೈಃ ॥

*(ಗೌಡಪಾದಕಾರಿಕಾ, ೨.೩೧)*

‘‘ಸ್ವಪ್ನದ ದೃಶ್ಯಗಳಂತೆ ಮತ್ತು ಮರುಭೂಮಿಯಲ್ಲಿ ಗಂಧರ್ವ ನಗರದಂತೆ, ವೇದಾಂತದಲ್ಲಿ ವಿಚಕ್ಷಣರಾದವರು ಈ ಜಗತ್ತನ್ನು ಕಾಣುತ್ತಾರೆ.’’

ಡೇವಿಡ್ ಈಗಲ್‌ಮನ್ (David Eagleman) ಎಂಬುವವರ ‘The Brain‘ ಎಂಬ ಗ್ರಂಥದಲ್ಲಿ ಬರುವ ಒಂದು ಪ್ರಸಂಗವು

ಈ ಮೇಲಿನ ವಿಷಯವನ್ನೇ ಸಮರ್ಥಿಸುತ್ತದೆ. ಅಮೆರಿಕದ ಆಲ್ಕೆಟ್ರಾಜ್ (Alcatraj) ಎಂಬ ದ್ವೀಪದಲ್ಲಿ ಅತ್ಯಂತ ದುಷ್ಟರಾದ ಕೈದಿಗಳನ್ನು ಕೂಡಿಹಾಕುವ ಸೆರೆಮನೆಗಳಿವೆಯಂತೆ. ಅವರು ಅಲ್ಲಿಯೂ ಕೀಟಲೆ ಮಾಡಲು ಪ್ರಾರಂಭಿಸಿದರೆ ಅವರನ್ನು ಗಾಢ ಕತ್ತಲೆಯ ಗುಹೆಯಲ್ಲಿ (Dark hole) ಬಂಧಿಸುತ್ತಿದ್ದರು. ಅಲ್ಲಿ ಸ್ವಲ್ಪವೂ ಬೆಳಕಾಗಲಿ ಶಬ್ದವಾಗಲಿ ಸುಳಿಯುತ್ತಿರಲಿಲ್ಲ. (ಈಗ ಇವುಗಳನ್ನೆಲ್ಲ ಮುಚ್ಚಲಾಗಿದೆಯಂತೆ.) ಈ ರೀತಿಯ ಡಾರ್ಕ್ ಹೋಲ್‌ನಲ್ಲಿ ಬಂಧಿತನಾಗಿದ್ದ ಒಬ್ಬ ಕೈದಿಯು ತನ್ನ ಅನುಭವವನ್ನು ಈ ರೀತಿ ವರ್ಣಿಸುತ್ತಾನೆ. ''ಅಲ್ಲಿ ಮಾನಸಿಕ ಕಲ್ಪನೆಗಳು ಗರಿಗೆದರಿ ತಮ್ಮದೇ ಲೋಕವನ್ನು ಸೃಷ್ಟಿಸುತ್ತವೆ. ಅವು ಅತ್ಯಂತ ಸ್ಪಷ್ಟವೂ ಜೀವಂತವೂ ಆಗುತ್ತವೆ. ವಿಶೇಷವೇನೆಂದರೆ, ಅವೆಲ್ಲವೂ ನಮ್ಮ ಹೊರಗಡೆಯೇ ನಡೆಯುತ್ತಿರುವಂತೆ ಎದ್ದು ಕಾಣುತ್ತವೆ.'' *(ನೋಡಿ, (The Brain, p.56)*

ಗ್ರಂಥಕರ್ತರು ಹೇಳುತ್ತಾರೆ:

''ರೂಪ, ಶಬ್ದ, ಗಂಧ ಮುಂತಾದೆಲ್ಲ ಅನುಭವಗಳೂ ಪ್ರತ್ಯಕ್ಷ ಅನುಭವಗಳಲ್ಲ. ಅವೆಲ್ಲವೂ ಕತ್ತಲೆಯ ಚಿತ್ರಮಂದಿರಲ್ಲಿ ನಡೆಯುವ ವಿದ್ಯುತ್-ರಾಸಾಯನಿಕ ಕ್ರಿಯೆಗಳ ಪ್ರದರ್ಶನ.'' *(The Brain. P-42)*. ನಾವು ನೋಡುತ್ತಿರುವುದು ಅಜ್ಞಾನವೆಂಬ ಕತ್ತಲೆಯಲ್ಲಿ ನಿರ್ಮಿಸಿಕೊಂಡ ಜಗತ್ತು.

ಈ ದೃಷ್ಟಿಯಿಂದ ನೋಡಿದಾಗ ಕನಸಿಗೂ ಎಚ್ಚರದ ಅವಸ್ಥೆಗೂ ಯಾವ ವ್ಯತ್ಯಾಸವೂ ಇಲ್ಲವೆಂಬುದನ್ನು ಗೌಡಪಾದರು ತಮ್ಮ ಕಾರಿಕೆಯಲ್ಲಿ ಸಾಕಷ್ಟು ಪ್ರಮಾಣಗಳ ಮೂಲಕ ಸಿದ್ಧಾಂತಪಡಿಸಲು ಪ್ರಯತ್ನಿಸಿದ್ದಾರೆ. ಓರ್ವ ಬೌದ್ಧ ಸಂನ್ಯಾಸಿಯು ಕನಸಿನಲ್ಲಿ ತಾನು ಬಣ್ಣದ ಚಿಟ್ಟೆಯಾಗಿರುವುದಾಗಿ ಕಂಡನು. ಎಚ್ಚರವಾದ ಮೇಲೆ ಅವನು ಚಿಂತಿಸತೊಡಗಿದ, ''ನಾನು ಚಿಟ್ಟೆಯಾಗಿದ್ದು ಮನುಷ್ಯನಾಗಿರುವೆನೆಂದು ಕನಸು ಕಾಣುತ್ತಿರುವೆನೊ ಅಥವಾ ನಾನು ಮನುಷ್ಯನಾಗಿದ್ದು ಚಿಟ್ಟೆಯಾಗಿರುವುದಾಗಿ ಕನಸು ಕಂಡೆನೊ?''

ವಿಚಾರ ಮಾಡುವುದರ ಉದ್ದೇಶ ಪ್ರಾಪಂಚಿಕ ವಿಷಯದಲ್ಲಿ ವೈರಾಗ್ಯವನ್ನು ಬೆಳೆಸಿಕೊಳ್ಳುವುದು. ಆದ್ದರಿಂದ ವಿವೇಕ ಮತ್ತು ವೈರಾಗ್ಯ ಎರಡೂ ಒಟ್ಟಿಗೆ ಕೆಲಸಮಾಡಬೇಕು. ವಿಚಾರ ಮಾಡಿಯೂ ವೈರಾಗ್ಯ ಬೆಳೆಯದಿದ್ದರೆ ಅದು ನಿಷ್ಪ್ರಯೋಜಕ. ಸುಮ್ಮನೆ ಜಗತ್ತು ಸ್ವಪ್ನವತ್ ಎಂದು ಬಾಯಲ್ಲಿ ಹೇಳಿದ ಮಾತ್ರಕ್ಕೆ, ವಾದ ಮಾಡಿದ ಮಾತ್ರಕ್ಕೆ ಏನೂ ಪ್ರಯೋಜನವಿಲ್ಲ. ವಿಚಾರವು ನಮ್ಮ ನಿತ್ಯಜೀವನದಲ್ಲಿ ವೈರಾಗ್ಯದ ರೂಪದಲ್ಲಿ ಅಭಿವ್ಯಕ್ತವಾಗಬೇಕು. ವೇದಾಂತ ಚಿಂತನೆಗಳೆಂಬ ಆಹಾರವು ವಿಚಾರವೆಂಬ ಜೀರ್ಣಕ್ರಿಯೆಯ ಮೂಲಕ ವೈರಾಗ್ಯವೆಂಬ ಪೌಷ್ಟಿಕತೆಯನ್ನು ನೀಡಬೇಕು. ವೈರಾಗ್ಯವೇ ಆಧ್ಯಾತ್ಮಿಕ ಜೀವನಕ್ಕೆ ಪುಷ್ಟಿಯನ್ನು ನೀಡುವಂತಹದು. ವಿವೇಕಾನಂದರ ಉಕ್ತಿ: ''ಒಬ್ಬನು ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಪಡೆಯಬಹುದು. ಆದರೆ ಅವನು ತನ್ನ ಭಾವೋದ್ವೇಗಗಳಿಗೆ ಮತ್ತು ಆಸೆಗಳಿಗೆ ದಾಸನಾಗಿದ್ದರೆ, ಸ್ವಾತಂತ್ರ್ಯದ ಪವಿತ್ರ ಆನಂದವನ್ನು ಅನುಭವಿಸಲಾರ. ಈ ಸ್ವಾತಂತ್ರ್ಯ ಸುಖವನ್ನು ಅನುಭವಿಸಲು ವೈರಾಗ್ಯ ಆವಶ್ಯಕ.''

### ಶಕ್ತಿಯ ಆಟ

**ಶ್ರೀರಾಮಕೃಷ್ಣರು:** ''ಆದರೆ ಇಡೀ ಜೀವನವನ್ನೆಲ್ಲ ವಿಚಾರಕ್ಕೆ ಮೀಸಲಾಗಿಟ್ಟರೂ ಸಮಾಧಿಯ ಸ್ಥಿತಿಯನ್ನು ಹೊಂದುವವರೆಗೆ ಶಕ್ತಿಯ ಇಲಾಖೆಯನ್ನು ಬಿಟ್ಟು ಹೊರಗೆ ಹೋಗುವ ಹಾಗೆ ಇಲ್ಲ. 'ನಾನು ಧ್ಯಾನ ಮಾಡುತ್ತೇನೆ', 'ನಾನು ಚಿಂತನೆ ಮಾಡುತ್ತೇನೆ' ಎಂಬುದಾಗಿ ನೀನು ಯಾವಾಗಲೂ ಇನ್ನೂ ಶಕ್ತಿಯ ಮಧ್ಯೆ, ಶಕ್ತಿಯ ಐಶ್ವರ್ಯದ ಮಧ್ಯೆ ಚಲಿಸುತ್ತಿದ್ದೀಯೆ.''

ಧ್ಯಾನ ಮಾಡುವುದು, ಭಗವತ್ ಚಿಂತನೆ ಮಾಡುವುದು ಇವೇ ಮುಂತಾದ ಆಧ್ಯಾತ್ಮಿಕ ಸಾಧನೆಗಳು ಮನಸ್ಸಿನಲ್ಲಿಯೇ ನಡೆಯುವ ಕ್ರಿಯೆಗಳು, ಮತ್ತು ಮನಸ್ಸು ಶಕ್ತಿಯ ಅಥವಾ ಮಾಯೆಯ ಕಾರ್ಯ. ಮಾಯೆಯ ಮೂಲಕವೇ ನಾವು ಮಾಯೆಯ ಕಾರ್ಯವನ್ನು ದಾಟಿಹೋಗಬೇಕು. ಪಾರಮಾರ್ಥಿಕ ದೃಷ್ಟಿಯಿಂದ ಇವೆಲ್ಲವೂ ಮಾಯೆಯೇ.

ನ ನಿರೋಧೋ ನ ಚೋತ್ಪತ್ತಿಃ ನ ಸಿದ್ಧೋ ನ ಚ ಸಾಧಕಃ ।
ನ ಮುಮುಕ್ಷುರ್ನ ವೈ ಮುಕ್ತಿರಿತ್ಯೇಷಾ ಪರಮಾರ್ಥತಃ ॥

''ಪಾರಮಾರ್ಥಿಕ ದೃಷ್ಟಿಯಿಂದ ಪ್ರಲಯವೂ ಇಲ್ಲ, ಸೃಷ್ಟಿಯೂ ಇಲ್ಲ; ಸಿದ್ಧನೂ ಇಲ್ಲ, ಸಾಧಕನೂ ಇಲ್ಲ; ಮುಮುಕ್ಷುವೂ ಇಲ್ಲ, ಮುಕ್ತಿಯೂ ಇಲ್ಲ.''

ಶ್ರೀರಾಮಕೃಷ್ಣರು ಮುಂದುವರಿದು ಹೇಳುತ್ತಾರೆ: ''ಅದಕ್ಕಾಗಿಯೇ ಬ್ರಹ್ಮನಿಗೂ ಶಕ್ತಿಗೂ ಅಭೇದ ಎಂದು ಹೇಳುವುದು. ಒಂದನ್ನು ಸ್ವೀಕರಿಸಿದರೆ ಇನ್ನೊಂದನ್ನು ಸ್ವೀಕರಿಸಲೇಬೇಕಾಗುತ್ತದೆ. ಇದು ಬೆಂಕಿ ಮತ್ತು ಅದರ ಸುಡುವ ಶಕ್ತಿಯ ಹಾಗೆ; ಬೆಂಕಿಯನ್ನು ಸ್ವೀಕರಿಸಿದರೆ ಅದರ ಸುಡುವ ಶಕ್ತಿಯನ್ನೂ ಸ್ವೀಕರಿಸಬೇಕಾಗುತ್ತದೆ. ಸುಡುವ ಶಕ್ತಿಯನ್ನು ಬಿಟ್ಟು ಬೆಂಕಿಯನ್ನು, ಬೆಂಕಿಯನ್ನು ಬಿಟ್ಟು ಸುಡುವ ಶಕ್ತಿಯನ್ನು ಭಾವಿಸಲಾಗುವುದೇ ಇಲ್ಲ. ಸೂರ್ಯನನ್ನು ಬಿಟ್ಟು ಸೂರ್ಯರಶ್ಮಿಯನ್ನು ಭಾವಿಸಲಾಗುವುದಿಲ್ಲ. ಸೂರ್ಯರಶ್ಮಿಯನ್ನು ಬಿಟ್ಟು ಸೂರ್ಯನನ್ನು ಭಾವಿಸಲಾಗುವುದಿಲ್ಲ.''

ಸುಡುವ ಶಕ್ತಿಯನ್ನೇ ನಾವು ಬೆಂಕಿ ಎಂದು ಕರೆಯುವುದು. ಅದು ಅವ್ಯಕ್ತ ಸುಡುವ ಶಕ್ತಿಯಾಗಿಯೂ ಇರುತ್ತದೆ; ಬೆಂಕಿಯಂತೆ ಪ್ರಕಾಶಮಾನವಾಗಿಯೂ ಉರಿಯುತ್ತದೆ. ಹಾಗೆಯೇ ಬ್ರಹ್ಮನು ಅವ್ಯಕ್ತವಾಗಿಯೂ ಇರುತ್ತಾನೆ, ಪ್ರಪಂಚರೂಪದಲ್ಲಿ ಬೆಳಗುತ್ತಲೂ ಇರುತ್ತಾನೆ. 'ವಿವೇಕಚೂಡಾಮಣಿ'ಯ ಒಂದು ಶ್ಲೋಕ: *(೧೬೮)*

**ಪಂಚೇಂದ್ರಿಯೈಃ ಪಂಚಭಿರೇವ ಹೋತೃಭಿಃ**
**ಪ್ರಚೀಯಮಾನೋ ವಿಷಯಾಜ್ಯಧಾರಯಾ ।**
**ಜಾಜ್ವಲ್ಯಮಾನೋ ಬಹುವಾಸನೇಂಧನೈಃ**
**ಮನೋಮಯಾಗ್ನಿಃ ದಹತಿ ಪ್ರಪಂಚಮ್ ॥**

''ಪಂಚೇದ್ರಿಯಗಳೆಂಬ ಪಂಚ ಹೋತೃಗಳು ಸುರಿಯುತ್ತಿರುವ ವಿಷಯಗಳೆಂಬ ತುಪ್ಪದ ಧಾರೆಯಿಂದ ವರ್ಧಿಸುತ್ತಿರುವ, ಬಹುಬಗೆಯ ವಾಸನೆಗಳೆಂಬ ಕಟ್ಟಿಗೆಗಳಿಂದ ಪ್ರಜ್ವಲಿಸುತ್ತಿರುವ ಮನೋಮಯಕೋಶವೆಂಬ ಅಗ್ನಿಯು ಪ್ರಪಂಚ ರೂಪದಲ್ಲಿ ಉರಿಯುತ್ತಿರುವುದು.''

ಸತ್ಯದ ಈ ಎರಡು ಮುಖಗಳನ್ನು static and dynamic (ಅಚಲ-ಸಚಲ) aspects of reality ಎಂದು ಕರೆಯಬಹುದು.

## ಸೃಷ್ಟಿ-ಪ್ರಳಯ ಒಂದೇ

ಶ್ರೀರಾಮಕೃಷ್ಣರು: ''ಆಕೆ (ಕಾಳಿ) ವಿವಿಧ ಭಾವಗಳಿಂದ ಕ್ರೀಡಿಸುತ್ತಾಳೆ. ಆಕೆಯೇ ಮಹಾಕಾಳಿ, ನಿತ್ಯಕಾಳಿ, ಶ್ಮಶಾನಕಾಳಿ, ರಕ್ಷಾಕಾಳಿ, ಶ್ಯಾಮಾಕಾಳಿ, — ಇವರ ವಿಷಯವಾಗಿ ತಂತ್ರಶಾಸ್ತ್ರದಲ್ಲಿ ವಿವರಣೆ ಇದೆ. ಸೃಷ್ಟಿ ಆರಂಭವಾಗುವುದಕ್ಕೆ ಮುನ್ನ, ಚಂದ್ರ, ಸೂರ್ಯ, ಗ್ರಹ, ಪೃಥ್ವಿ ಇವೆಲ್ಲ ಉದ್ಭವವಾಗುವುದಕ್ಕೆ ಮುನ್ನ, ಎಲ್ಲೆಲ್ಲೂ ನಿಬಿಡಾಂಧಕಾರ ಹಬ್ಬಿದಾಗ ಭಗವತಿ - ನಿರಾಕಾರ ಸ್ವರೂಪಿಣಿ ಮಹಾಕಾಳಿ ಮಹಾಕಾಲನೊಡನೆ ಐಕ್ಯವಾಗಿದ್ದಳು.''

ಈ ಮೇಲಿನ ಹೇಳಿಕೆ ಋಗ್ವೇದದಲ್ಲಿ ಬರುವ 'ನಾಸದೀಯ ಸೂಕ್ತ'ದ ಸಾಲುಗಳನ್ನು ನೆನಪಿಗೆ ತಂದುಕೊಡುತ್ತದೆ. **'ನಾಸದಾಸೀನ್ನೋ ಸದಾಸೀತ್ತದಾನೀಮ್-'** ''ಆಗ ಸತ್ತೂ ಇರಲಿಲ್ಲ, ಅಸತ್ತೂ ಇರಲಿಲ್ಲ'' ಈ ವಿರೋಧಾಭಾಸವಾದ ಹೇಳಿಕೆಯೇ ಸೃಷ್ಟಿಯ ನಿಗೂಢತೆಯನ್ನು ಸೂಚಿಸುತ್ತದೆ. ಆ ಆತ್ಯಂತಿಕ ಸತ್ಯದ ಕುರಿತಾಗಿ ಇದೆ, ಇಲ್ಲ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಈ ಹೇಳಿಕೆಗಳು ಸಾಪೇಕ್ಷ ಜಗತ್ತಿಗೆ ಅನ್ವಯಿಸುವಂತಹವು. ನಾವು ನಾಮ-ರೂಪಾತ್ಮಕ ವಸ್ತುಗಳ ಬಗ್ಗೆ, ನಮ್ಮ ಮನಸ್ಸು-ಇಂದ್ರಿಯ ಗ್ರಾಹ್ಯವಾದ ವಿಷಯಗಳ ಬಗ್ಗೆ ಅದು ಇದೆ, ಅಥವಾ ಇಲ್ಲ ಎಂದು ಹೇಳಬಹುದು. ಆದರೆ ನಮ್ಮ ಗ್ರಹಿಕೆಗೆ ಮೀರಿದ ವಿಷಯದ ಬಗ್ಗೆ ನಾವೇನನ್ನೂ ಹೇಳುವುದಕ್ಕಾಗುವುದಿಲ್ಲ. **ಸದೇವ ಸೌಮ್ಯ ಇದಮಗ್ರ ಆಸೀತ್** ಎಂದು ಹೇಳುವ ಛಾಂದೋಗ್ಯ ಶ್ರುತಿಯೇ **ಅಸದೇವೇದಮಗ್ರ ಆಸೀತ್** ಎಂದೂ ಹೇಳುತ್ತದೆ. ಶ್ರೀರಾಮಕೃಷ್ಣರೂ ಪರಬ್ರಹ್ಮದ ವಿಚಾರವಾಗಿ 'ಸದಸದೇರ್ ಪಾರ್' ಎಂದು ಹೇಳುತ್ತಾರೆ. ಶ್ರೀಕೃಷ್ಣನೂ ಕೂಡ ಭಗವದ್ಗೀತೆಯಲ್ಲಿ *(೧೩.೧೨)* **'ನ ಸತ್ತನ್ನಾಸದುಚ್ಯತೇ'** - ''ಅದು ಸತ್, ಅಸತ್ ಅಲ್ಲವೆಂದು ಹೇಳಿದೆ'' ಎಂದು ಹೇಳುತ್ತಾನೆ.

ಇಲ್ಲಿ 'ಇತ್ತು' (ಆಸೀತ್) ಎಂಬ ಪದವು ಭೂತಕಾಲವನ್ನು ಸೂಚಿಸುತ್ತದೆ. ಹಿಂದೆ ಇತ್ತು ಎಂದು ಹೇಳಿದಾಗ ಈಗ ಇಲ್ಲವೇನೋ ಎಂಬ ಸಂದೇಹ ಉಂಟಾಗುತ್ತದೆ. ಕಾರಣವು ಕಾರ್ಯದಲ್ಲಿ ಲಯವಾಗಿಬಿಡುತ್ತದೆಯೆ? ಬೀಜವು ಮರವಾಗಿ ಪರಿಣಮಿಸಿ ತನ್ನನ್ನು ಕಳೆದುಕೊಳ್ಳುವಂತೆಯೆ? ಅಥವಾ ಹಾಲು ಮೊಸರಾಗಿ ತಾನಿಲ್ಲದಾಗುವಂತೆಯೆ? ಪರಬ್ರಹ್ಮ ವಸ್ತುವು ಜಗತ್ತಾಗಿ ಪರಿಣಮಿಸಿ ತಾನಿಲ್ಲದಾಗುವುದಾದರೆ ಅದನ್ನು ಆತ್ಯಂತಿಕ ಸತ್ಯವೆಂದು ಕರೆಯಲಾಗುವುದಿಲ್ಲ. ಹಗ್ಗದಲ್ಲಿ ಹಾವನ್ನೋ ಬಳ್ಳಿಯನ್ನೋ ನೆಲದ ಬಿರುಕನ್ನೋ ಇನ್ನೇನನ್ನೋ ನೋಡಿದರೂ, ಹಗ್ಗ ಹಗ್ಗವಾಗಿಯೇ ಇರುತ್ತದೆ. ಹಾಗೆಯೇ ಈ ಇಂದ್ರಿಯ ಜಗತ್ತು ಪರಬ್ರಹ್ಮದಲ್ಲಿ ಆರೋಪಿತವಾಗಿರುವುದಷ್ಟೇ. ಹೇಗೆ ಮಡಕೆಯ ನಿಜವಾದ ಅಸ್ತಿತ್ವವು ಮಣ್ಣೇ ಆಗಿದೆಯೋ ಹಾಗೆಯೇ ಈ ಜಗತ್ತಿನ ನಿಜವಾದ ಅಸ್ತಿತ್ವವು ಪರಬ್ರಹ್ಮವೇ ಆಗಿದೆ.

ಇದರ ಮುಂದಿನ ವಾಕ್ಯಭಾಗವು ಶ್ರೀರಾಮಕೃಷ್ಣರ ವಿಚಾರವನ್ನೇ ನೇರವಾಗಿ ಪ್ರತಿಬಿಂಬಿಸುತ್ತದೆ: **ತಮ ಆಸೀತ್ ತಮಸಾ ಗೂಢಮಗ್ರೇ** ''ಆಗ ಕತ್ತಲೆಯು ಕತ್ತಲೆಯ ಗರ್ಭದಲ್ಲಿ ಹುದುಗಿತ್ತು.'' ಸೂರ್ಯ, ಚಂದ್ರ, ನಕ್ಷತ್ರಗಳಿಂದ ಕೂಡಿದ ಈ ಜಗತ್ತು ಇಲ್ಲದಿರುವ ಸ್ಥಿತಿಯೇ ನಿಬಿಡಾಂಧಕಾರ. ಅಲ್ಲಿ ಯಾವ ಭೌತಿಕ ಬೆಳಕೂ ಇರಲಿಲ್ಲ, ಆಧ್ಯಾತ್ಮಿಕಜ್ಯೋತಿಯಾದ ಪರಬ್ರಹ್ಮವೊಂದೇ ಬೆಳಗುತ್ತಿತ್ತು - ''ನಿರಾಕಾರ ಸ್ವರೂಪಿಣಿ ಮಹಾಕಾಳಿ ಮಹಾಕಾಲನೊಡನೆ ಐಕ್ಯವಾಗಿದ್ದಳು.'' ಇದರ ಇಂಗಿತಾರ್ಥ: ನಮ್ಮ ಮನಸ್ಸು ವೃತ್ತಿ ಶೂನ್ಯವಾದಾಗ — ವೃತ್ತಿ ಶೂನ್ಯವಾಗುವುದೆಂದರೆ ಜಗತ್ತು ಶೂನ್ಯವಾಗುವುದು — ಸತ್ಯವು ಪ್ರಕಾಶಿಸತೊಡಗುತ್ತದೆ. ನಮ್ಮ ಮನಸ್ಸನ್ನು ಕತ್ತಲೆಯು ಸಂಪೂರ್ಣ ಆವರಿಸಿದಾಗ ಆ ಗಾಢಾಂಧಕಾರದಲ್ಲಿ ಸತ್ಯವು ಮಿಂಚಿನಂತೆ ಹೊಳೆಯುತ್ತದೆ. ಈ ಸಂದರ್ಭದಲ್ಲಿ ಶ್ರೀರಾಮಕೃಷ್ಣರು ಹಾಡುತ್ತಿದ್ದ ಒಂದು ಹಾಡು ನೆನಪಿಗೆ ಬರುತ್ತದೆ: **ನಿಬಿಡ ಅಂಧಾರೇ ಮಾ ತೋರ್ ಚಮಕೇ ಓ ರೂಪರಾಶಿ** - 'ತಾಯಿ, ಗಾಢಾಂಧಕಾರದಲ್ಲಿ ನಿನ್ನ ರೂಪರಾಶಿಯು ಬೆಳಗುತ್ತದೆ.'

ಇಲ್ಲಿ ನಾವು ಗಮನಿಸಬೇಕಾದ ಅಂಶ: ಪ್ರಳಯ ಶಕ್ತಿಯೂ (ವಿನಾಶಶಕ್ತಿಯೂ) ಆಕೆಯೇ. ಸೃಷ್ಟಿ ಮತ್ತು ವಿನಾಶ ನಿರಂತರವಾಗಿ ನಡೆಯುತ್ತಲೇ ಇರುತ್ತದೆ — ಇವು ಒಂದೇ ಶಕ್ತಿಯ ಎರಡು ಮುಖಗಳು. ಒಂದರ ಸೃಷ್ಟಿಯೆಂದರೆ ಇನ್ನೊಂದರ ನಾಶ, ಒಂದರ ನಾಶವೆಂದರೆ ಇನ್ನೊಂದರ ಸೃಷ್ಟಿ. ದೇಹ ನಾಶವಾಗುತ್ತದೆ, ಬೂದಿ ಸೃಷ್ಟಿಯಾಗುತ್ತದೆ. ಅಥವಾ ಮಣ್ಣಾಗುತ್ತದೆ. ಶ್ರೀ ಅರವಿಂದರು ಹೇಳುತ್ತಾರೆ: ''ವಿನಾಶವೇ ಪ್ರಗತಿಯ ಮೊದಲ ನಿಯಮ''; ''ರುದ್ರನ ಋಣ ತೀರಿಸದಿದ್ದರೆ, ವಿಷ್ಣುವಿನ ಶಾಸನ ಪ್ರವರ್ತಿಸಲಾರದು.''

*(ಮುಂದುವರಿಯುವುದು)*